# ಕಾಲ್ಚೆಂಡಿನ ಕಿಶೋರ



■ ಪ್ರವೀಣ ಕುಲಕರ್ಣಿ

ಕಳೆದ ವಾರವಷ್ಟೇ ಐಪಿಎಲ್ ಕ್ರಿಕೆಟ್ ಹಂಗಾಮ ಮುಗಿದಿದೆ. ಹೊಸ ಚಾಂಪಿಯನ್ ಆಗಿ ಹೊರಹೊಮ್ಮಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವದಲ್ಲಿ ಕಾಲ್ತುಳಿತ ಉಂಟಾಗಿ ಹನ್ನೊಂದು ಮಂದಿ ಪ್ರಾಣ ಕಳೆದುಕೊಂಡಿದ್ದೂ ಆಗಿದೆ. ನಮ್ಮ ಯುವಪೀಳಿಗೆಯನ್ನು ಕ್ರಿಕೆಟ್ ಯಾವ ಪರಿ ಆವರಿಸಿಕೊಂಡಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಈ ಘಟನೆ. ಆದರೆ, ಇಲ್ಲೊಬ್ಬ ಪೋರನಿದ್ದಾನೆ. ಕ್ರಿಕೆಟ್ ಅಭಿಮಾನದ ಹುಚ್ಚು ಹೊಳೆಗೆ ವ್ಯತಿರಿಕ್ತವಾಗಿ ಆತ ಮೂರೂ ಹೊತ್ತು ಫುಟ್‌ಬಾಲ್‌ನ ಜಪ ಮಾಡುತ್ತಾನೆ. ಫುಟ್‌ಬಾಲ್ ಅಂಗಳದಲ್ಲಿ ಹೊಸ ಭರವಸೆಯ ಮಿಂಚನ್ನೂ ಹರಿಸಿದ್ದಾನೆ. ಕಾಲ್ಚೆಂಡಿನ ಮೂಲಕ ಕೋಲ್ಮಿಂಚು ಹರಿಸುತ್ತಿರುವ ಆ ಪೋರನೇ ಬೆಂಗಳೂರಿನ ಜೋರ್ಡಾನ್ ಮೊಬಿನ್ ಪಾಲ್.

ಜೋರ್ಡಾನ್‌ಗೆ ಭಯ ಎನ್ನುವುದೇ ಗೊತ್ತಿಲ್ಲ. ಪುಟ್ಟ ಕಂಗಳಲ್ಲಿ ದೊಡ್ಡ ಕನಸನ್ನು ತುಂಬಿಕೊಂಡಿದ್ದಾನೆ ಕೂಡ. ಬೆಂಗಳೂರು ಫುಟ್‌ಬಾಲ್ ಲೋಕದಲ್ಲಿ ದೊಡ್ಡ ಅಲೆ ಎಬ್ಬಿಸಿರುವ ಈ ಪೋರ ಸಣ್ಣ ವಯಸ್ಸಿನಲ್ಲೇ ಹಲವು ದಾಖಲೆ ಬರೆದಿದ್ದಾನೆ. ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ವರ್ಷದ ಆಟಗಾರ (ಏಳು ವರ್ಷದೊಳಗಿನವರ ವಿಭಾಗ), ಮರಡೋನಾ ಕಪ್ ಟೂರ್ನಿಯ ಆಟಗಾರ (ಎಂಟು ವರ್ಷದೊಳಗಿನವರ ವಿಭಾಗ), ಡಿಪಿಡಿಎಲ್ ವರ್ಷದ ಆಟಗಾರ (ಹತ್ತು ವರ್ಷದೊಳಗಿನವರ ವಿಭಾಗ), ಬಿಎಫ್‌ಸಿ ಕೆಎಸ್‌ಎಫ್‌ಎ ಅಂತರ ಶಾಲಾ ಟೂರ್ನಿಯ ಆಟಗಾರ, ಬಿಎಫ್‌ಸಿ ವರ್ಷದ ಆಟಗಾರ (ಹನ್ನೊಂದು ವರ್ಷದೊಳಗಿನವರ ವಿಭಾಗ ಮತ್ತು ಹದಿಮೂರು ವರ್ಷದೊಳಗಿನವರ ವಿಭಾಗ) ಪ್ರಶಸ್ತಿಗಳನ್ನು ಆತ ಬಾಚಿಕೊಂಡಿದ್ದಾನೆ.

ಫುಟ್‌ಬಾಲ್ ಅಂಗಳದಲ್ಲಿ ದೊಡ್ಡ ಸಾಧನೆ ಮಾಡಿದರೂ ಆತನಿನ್ನೂ ಪೋರ ತಾನೆ? 'ನಾನು ಫುಟ್‌ಬಾಲ್ ಆಡುತ್ತಿಲ್ಲ ಎಂದು ಎಲ್ಲರೂ ತಮಾಷೆ ಮಾಡುತ್ತಿದ್ದರಿಂದ ಈ ಆಟಕ್ಕೆ ಇಳಿದೆ' ಎಂದು ಆತ ಮುಗ್ಧವಾಗಿ ಹೇಳುತ್ತಾನೆ. ಹದಿಮೂರರ ಹರೆಯದ ಈ ಪೋರ ಕಳೆದ ಏಳು ವರ್ಷಗಳಿಂದ ನಿತ್ಯ ನಸುಕಿನಲ್ಲಿ ಎದ್ದು ಫುಟ್‌ಬಾಲ್ ಅಭ್ಯಾಸಕ್ಕೆ ಇಳಿಯುತ್ತಾನೆ. ಸ್ವತಃ ಸುನಿಲ್ ಚೇಟ್ರಿ ಅವರಿಂದ ಪ್ರಶಸ್ತಿ ಪಡೆಯುವ ಮಟ್ಟಕ್ಕೆ ಈ ಅವಧಿಯಲ್ಲಿ ಬೆಳೆದಿದ್ದಾನೆ. ಜೋರ್ಡಾನ್‌ನ ತಂದೆ ಮೊಬಿನ್ ಅವರದು ಕೇರಳ ಮೂಲ. ಕೆಲಸಕ್ಕಾಗಿ ಅವರು ಬೆಂಗಳೂರಿಗೆ ಬಂದು ನೆಲೆ ನಿಂತವರು. ಇದರಿಂದಾಗಿ ಜೋರ್ಡಾನ್‌ಗೆ ಬಿಎಫ್‌ಸಿ ಫುಟ್‌ಬಾಲ್ ತರಬೇತಿಗೆ ಸೇರಲು ಸಾಧ್ಯವಾಯಿತು.

'ಜೋರ್ಡಾನ್ ಐದೂವರೆ ವರ್ಷದವನಿದ್ದಾಗ ಫುಟ್‌ಬಾಲ್ ಆಡಲು ಶುರು ಮಾಡಿದ. ಬಿಎಫ್‌ಸಿಯ ಬೆಳ್ಳಂದೂರು ಕೇಂದ್ರದಲ್ಲಿ ಪ್ರವೇಶ ಪಡೆದ. ತಾನಾಡಿದ ಮೊದಲ ಟೂರ್ನಿಯಲ್ಲಿಯೇ ತಾನು ಪ್ರತಿನಿಧಿಸುತ್ತಿದ್ದ ತಂಡವು ಪ್ರಶಸ್ತಿ ಗೆಲ್ಲುವಲ್ಲಿ ಮಹತ್ವದ ಪಾತ್ರವನ್ನೂ ವಹಿಸಿದ. ಬಿಎಫ್‌ಸಿ ಅಕಾಡೆಮಿಯ ಏಳು ವರ್ಷದೊಳಗಿನವರ ತಂಡದಲ್ಲಿ ಸ್ಥಾನ ಪಡೆದ' ಎಂದು ಆತನ ತಾಯಿ ಪ್ರಿಯಾ ಹೇಳುತ್ತಾರೆ.

ಜೋರ್ಡಾನ್‌ನ ಆತ್ಮವಿಶ್ವಾಸ ಎಂಥವರನ್ನೂ ಬೆರಗುಗೊಳಿಸುತ್ತದೆ. 'ಮುಂದೆ ನಾನು ಭಾರತ ತಂಡದ ನಾಯಕನಾಗಬೇಕೆಂಬ ಆಸೆ ಇದೆ. ಹಾಗಾದರೆ, ವಿಶ್ವಕಪ್ ಟೂರ್ನಿಗೆ ಭಾರತ ತಂಡವು ಅರ್ಹತೆ ಗಿಟ್ಟಿಸುವಂತೆ ನೋಡಿಕೊಳ್ಳುತ್ತೇನೆ' ಎಂದು ಆತ ಎದೆಯುಬ್ಬಿಸಿ ಹೇಳುತ್ತಾನೆ. ಲಿಯೊನಿಲ್ ಮೆಸ್ಸಿ ಅಂದರೆ ಈ ಹುಡುಗನಿಗೆ ಪಂಚಪ್ರಾಣ. ಆಟಕ್ಕೆ ಒಲಿಯುವ ಮೊದಲು ಯಾವುದಾದರೂ ಪಂದ್ಯ ವೀಕ್ಷಿಸಿದ ನೆನಪಿದೆಯೇ ಎಂದು ಕೇಳಿದರೆ, 'ಬಾರ್ಸಿಲೋನಾ ಮತ್ತು ರಿಯಲ್ ಮ್ಯಾಡ್ರಿಡ್ ತಂಡಗಳ ನಡುವಿನ ಪಂದ್ಯವೇ ನಾನು ನೋಡಿದ ಮೊದಲ ಫುಟ್‌ಬಾಲ್ ಹಣಾಹಣಿ. ಎರಡೂ ತಂಡಗಳ ಆಟಗಾರರು ಹಲವು ಗೋಲುಗಳನ್ನು ಬಾರಿಸಿದ್ದರು' ಎಂದು ಹೇಳುತ್ತಾನೆ.

ಬಿಎಫ್‌ಸಿ ಅಕಾಡೆಮಿ ಸೇರಿದ್ದರಿಂದ ಪ್ರತಿ ಋತುವಿನಲ್ಲಿ ಹೆಚ್ಚಿನ ಪಂದ್ಯಗಳನ್ನು ಆಡಲು ಸಾಧ್ಯವಾಯಿತು ಎಂದೆನ್ನುವ ಈ ಹುಡುಗ, 'ಈಗ ಫುಟ್‌ಬಾಲ್ ಬಿಟ್ಟರೆ ನನಗೆ ಬೇರೆ ಜಗತ್ತೇ ಇಲ್ಲ' ಎನ್ನುತ್ತಾನೆ. 'ಜೋರ್ಡಾನ್ ಪುಟ್ಟ ಹುಡುಗನಾಗಿದ್ದ ದಿನಗಳಿಂದಲೂ ನಮ್ಮ ಮನೆಯ ಟಿವಿಯಲ್ಲಿ ಫುಟ್‌ಬಾಲ್ ಪಂದ್ಯಗಳು ಮೂಡಿಬರುತ್ತಿದ್ದವೇ ಹೊರತು ಕಾರ್ಟೂನ್‌ಗಳಲ್ಲ' ಎಂದು ಮೊಬಿನ್ ಪಾಲ್ ಮೆಲುಕು ಹಾಕುತ್ತಾರೆ. 'ಜೋರ್ಡಾನ್ ತಾಂತ್ರಿಕವಾಗಿ ಅತ್ಯುತ್ತಮವಾಗಿದ್ದು, ಮಹತ್ವದ ಕ್ಷಣಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವ ದಿಟ್ಟತನವೂ ಆತನಿಗಿದೆ. ಹೀಗೇ ಮುಂದುವರಿದರೆ ದೇಶದ ದೊಡ್ಡ ಫುಟ್‌ಬಾಲ್ ಆಟಗಾರನಾಗಿ ಆತ ರೂಪುಗೊಳ್ಳುವಲ್ಲಿ ಯಾವುದೇ ಸಂಶಯವಿಲ್ಲ' ಎಂದು ಆತನ ಕೋಚ್‌ಗಳು ಹೇಳುತ್ತಾರೆ.

ತನ್ನ ವಿಶಿಷ್ಟ ಶೈಲಿಯಿಂದ, ಭರ್ತಿ ಆತ್ಮವಿಶ್ವಾಸದಿಂದ, ಮುನ್ನುಗ್ಗುವ ಛಾತಿಯಿಂದ, ಭಯವಿಲ್ಲದ ಆಟದಿಂದ, ಎದುರಾಳಿಯ ರಕ್ಷಣಾ ಕೋಟೆಯನ್ನು ಛಿದ್ರಗೊಳಿಸಬಲ್ಲ ಕೌಶಲದಿಂದ ಗಮನಸೆಳೆದಿದ್ದಾನೆ ಜೋರ್ಡಾನ್. ಭರವಸೆಯ ಈ ಫಾರ್ವರ್ಡ್ ಆಟಗಾರನ ಆತ್ಮವಿಶ್ವಾಸವು ಭಾರತೀಯ ಫುಟ್‌ಬಾಲ್ ಭವಿಷ್ಯದ ಕುರಿತು ಕ್ರೀಡಾಪ್ರಿಯರು ಹೊಸ ಕನಸು ಕಾಣುವಂತೆ ಮಾಡುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,

Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65